ಉ) ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ "ನಿರಂತರ ಜ್ಯೋತಿ" ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಡಿ ಕೃಷಿ ಮತ್ತು ಕೃಷಿಯೇತರ ಸ್ಥಾನವರ ಗಳಿಗೆ ಪ್ರತ್ಯೇಕ ಫೀಡರ್‌ಗಳನ್ನು ಹಾಗೂ ಹೆಚ್ಚುರಿ ವಿತರಣಾ ಟ್ರಾನ್ಸ್ ಫಾರ್ಮರ್‌ಗಳನ್ನು ಅಳವಡಿಸುವುದರಿಂದ, ಗ್ರಾಮಾಂತರ ಪ್ರದೇಶಗಳಲ್ಲಿ ಹಾಲಿ ಇರುವ ಫೀಡರ್‌ಗಳಲ್ಲಿನ ವಿದ್ಯುತ್ ಹೊರೆಯು ಕಡಿಮೆಗೊಳ್ಳುತ್ತದೆ. ಇದರಿಂದ, ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ವಿಫಲತೆಯು ಕಡಿಮೆ ಗೊಂಡು, ಕೊರತೆಯನ್ನು ನೀಗಿಸಬಹುದಾಗಿದೆ. ಅಲ್ಲದೇ, ಈ ಯೋಜನೆಯಿಂದ ಕೆಪಾಸಿಟರ್ ಮೂಲಕ ನೀರಾವರಿ ಪಂಪುಸೆಟ್ಟುಗಳನ್ನು ಚಾಲನೆಗೊಳಿಸುವುದನ್ನು ತಡೆಗಟ್ಟಬಹುದಾಗಿದೆ.

(ಊ) ತಾಂತ್ರಿಕ ದೋಷಗಳಿಂದ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ವಿಫಲವಾಗುವುದನ್ನು ಕಡಿಮೆ ಮಾಡಲು ವಿತರರಣಾ ಟ್ರಾನ್ಸ್‌ಫಾರ್ಮರ್ ಕೇಂದ್ರಗಳಲ್ಲಿ ಹಾಗೂ ವಿದ್ಯುತ್ ಮಾರ್ಗಗಳಲ್ಲಿ ಅವಶ್ಯವಿರುವ ಎಲ್ಲಾ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಕಳೆದ ಮೂರು ವರ್ಷಗಳಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ಟಿ.ಸಿ.ಎಸ್. ಒದಗಿಸುವುದು

49 (64) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ತಿಪಟೂರು ಬೆಸ್ಕಾಂ ವಿಭಾಗೀಯ ಕಛೇರಿಗೆ ಕಳೆದ ಮೂರು ವರ್ಷಗಳಲ್ಲಿ ಒದಗಿಸಲಾಗಿರುವ ಟಿ.ಸಿ.ಗಳೆಷ್ಟು;

ಆ) ವಾರ್ಷಿಕವಾರು 100 ಕೆ.ವಿ.ಎ, 63 ಕೆ.ವಿ.ಎ, ಮತ್ತು 25 ಕೆ.ವಿ.ಎ, ಟಿ.ಸಿ.ಗಳ ಸಂಖ್ಯೆ ಎಷ್ಟು;

ಇ) ತಿಪಟೂರು ವಿಭಾಗೀಯ ಕಛೇರಿಯಿಂದ ಚಿಕ್ಕನಾಯಕನಹಳ್ಳಿ ಉಪ ವಿಭಾಗಕ್ಕೆ ಒದಗಿಸಲಾದ ಟಿ.ಸಿ. ಗಳೆಷ್ಟು (ವಾರ್ಷಿಕವಾರು ಮಾಹಿತಿ ನೀಡುವುದು);

ಶ್ರೀ ಶೋಭಾ ಕರಂದ್ಲಾಜೆ (ಇಂಧನ ಸಚಿವರು) :

ಅ) ಮತ್ತು ಆ)

ತುಮಕೂರು ಜಿಲ್ಲೆ ವ್ಯಾಪ್ತಿಗೆ ಬರುವ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ತಿಪಟೂರು ಕಾರ್ಯ ಮತ್ತು ಪಾಲನೆ ವಿಭಾಗಕ್ಕೆ ಕಳೆದ ಮೂರು ವರ್ಷಗಳಲ್ಲಿ ಅಂದರೆ 2008–09 ರಿಂದ 2011–12ರ ಫೆಬ್ರವರಿ 12 ರವರೆಗೆ ಒದಗಿಸಲಾಗಿರುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಒಟ್ಟು ಸಂಖ್ಯೆ 1495. ಇದರ ವರ್ಷವಾರು ಹಾಗೂ ಸಾಮರ್ಥ್ಯವಾರು ವಿವರ ಗಳು ಈ ಕೆಳಕಂಡಂತಿವೆ:–

ವರ್ಷ	ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಸಾಮರ್ಥ್ಯ			
	25 ಕೆ.ವಿ.ಎ.	63 ಕೆ.ವಿ.ಎ	100 ಕೆ.ವಿ.ಎ	ಒಟ್ಟು
2008–09	305	62	26	393
2009–10	407	84	27	518
2010–11	208	65	31	304
2011–12 (ಫೆಬ್ರವರಿ 12 ರವರೆಗೆ)	174	77	29	280
ಒಟ್ಟು	**1,094**	**288**	**113**	**1,495**

ಇ) ಬೆಂಗಳೂರು ವಿದ್ಯುತ್ ಸಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಬರುವ ತಿಪಟೂರು ಕಾರ್ಯ ಮತ್ತು ಪಾಲನೆ ವಿಭಾಗದಿಂದ ಚಿಕ್ಕನಾಯಕನಹಳ್ಳಿ ಕಾರ್ಯ ಮತ್ತು ಪಾಲನೆ ಉಪ–ವಿಭಾಗಕ್ಕೆ ಕಳೆದ 3 ವರ್ಷಗಳಲ್ಲಿ ಅಂದರೆ 2008–09 ರಿಂದ 2011–12ರ ಫೆಬ್ರವರಿ 12 ರವರೆಗೆ ಒದಗಿಸಲಾಗಿರುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಒಟ್ಟು ಸಂಖ್ಯೆ 557.

ಇದರ ವರ್ಷವಾರು ಹಾಗೂ ಸಾಮರ್ಥ್ಯವಾರು ವಿವರಗಳು ಈ ಕೆಳ ಕಂಡಂತಿವೆ:–

ವರ್ಷ	ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಸಾಮರ್ಥ್ಯ			
	25 ಕೆ.ವಿ.ಎ	63 ಕೆ.ವಿ.ಎ	100 ಕೆ.ವಿ.ಎ	ಒಟ್ಟು
2008–09	110	20	12	142
2009–10	199	20	7	226
2010–11	55	18	7	80
2011–12 (ಫೆಬ್ರವರಿ 12 ರವರೆಗೆ)	60	28	21	109
ಒಟ್ಟು	**424**	**86**	**47**	**557**

ಕುಂಭಕಲಾ ಅಭಿವೃದ್ಧಿ ಮಂಡಳಿಯ ಯೋಜನೆಗಳ ಅನುಷ್ಠಾನ

50 (321) ಶ್ರೀ ಮುನಿರಾಜು ಎಸ್. (ದಾಸರಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಹಾಗೂ ಬಂಧೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಜಾತಿಯಾದ ಕುಂಬಾರರ ಸಮುದಾಯಕ್ಕೆ ಇವರ ಮೂಲ ಕುಲಕಸುಬು ವೃತ್ತಿಯ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರವು ಇವರಿಗಾಗಿಯೇ ಪ್ರತ್ಯೇಕ ಕುಂಬಕಲಾ ಅಭಿವೃದ್ಧಿ ಮಂಡಳಿಯನ್ನು ಅಸ್ಥಿತ್ವಕ್ಕೆ ತಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಯಾವಾಗಿನಿಂದ ಅಸ್ಥಿತ್ವಕ್ಕೆ ತರಲಾಗಿದೆ. ಇದರ ವ್ಯಾಪ್ತಿ ಕಾರ್ಯಸ್ವರೂಪಗಳೇನು (ಇದರ ಇತ್ತೀಚಿನ ಚಟುವಟಿಕೆಗಳ ವಿವರ ಗಳನ್ನು ಜಿಲ್ಲಾವಾರು ಮಾಹಿತಿ ಒದಗಿಸುವುದು);

ಇ) ಈ ಮಂಡಳಿಯನ್ನು ಪ್ರತ್ಯೇಕವಾಗಿ ಗುರುತಿಸಿ ಪ್ರತ್ಯೇಕ ಸ್ವತಂತ್ರ ನಿಗಮವಾಗಿ ಪರಿವರ್ತಿಸಲಾಗಿದೆಯೇ, ಅಥವಾ ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮದ ವ್ಯಾಪ್ತಿಗೊಳಪಡಿಸಲಾಗಿದೆಯೇ, ಇದಕ್ಕೆ ಕಾರಣಗಳೇನು;